**ಇಂಡಿಯ ಫೌಂಢೇಷನ್ ಫಾರ್ ದಿ ಆರ್ಟ್ಸ್ ಸಂಸ್ಥೆಯ ಅನುದಾನ ಕಾರ್ಯಕ್ರಮಗಳ ಕುರಿತಾದ ಕೆಲವು ಮಾರ್ಗಸೂಚಿಗಳು:**

ಐಎಫ್ಎ ಸಂಸ್ಥೆಯ ಮಾಜಿ ಅಥವಾ ಹಾಲಿ ದಾನಿಗಳು, ಟ್ರಸ್ಟಿಗಳು ಮತ್ತು ಉದ್ಯೋಗಿಗಳು ತಮ್ಮ ಕಲಾ ಕ್ಷೇತ್ರಗಳಲ್ಲಿ ಉನ್ನತ ಸಾಧನೆಗಳನ್ನು ಮಾಡಿದವರಾಗಿರಬಹುದು. ಈ ಹಿನ್ನೆಲೆಯಲ್ಲಿ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಸಂಬಂಧಿಸಿದಂತೆ ಮುಂದೆ ಉದ್ಭವಿಸಬಹುದಾದ ಗೊಂದಲಗಳನ್ನು ಮನಗಂಡು ಈ ಕೆಲವು ಮಾರ್ಗಸೂಚಿಗಳನ್ನು ಐಎಫ್ಎ ಸಂಸ್ಥೆ ರಚಿಸಿದೆ.

ಈ ಮಾರ್ಗಸೂಚಿಗಳು ಈ ಕೆಳಗಿನ ವ್ಯಕ್ತಿಗಳಿಗೆ ಅನ್ವಯಿಸುತ್ತವೆ.

**1. ಉದ್ಯೋಗಿಗಳು :**

**1.1 ಐಎಫ್ಎ ಸಂಸ್ಥೆಯಲ್ಲಿ ಉದ್ಯೋಗಿಗಳಾಗಿದ್ದ ಸಮಯದಲ್ಲಿ**

ಎ) ಐಎಫ್ಎ ಸಂಸ್ಥೆಯಲ್ಲಿ ಉದ್ಯೋಗಿಗಳಾಗಿದ್ದ ಸಮಯದಲ್ಲಿ ಐಎಫ್ಎ ಉದ್ಯೋಗಿಗಳು ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಬಿ) ಐಎಫ್ಎ ಸಂಸ್ಥೆಯಲ್ಲಿ ಉದ್ಯೋಗಿಗಳಾಗಿದ್ದ ಸಮಯದಲ್ಲಿ ಐಎಫ್ಎ ಉದ್ಯೋಗಿಗಳ ಹತ್ತಿರದ ಸಂಬಂಧಿಗಳು (ಪೋಷಕರ, ಮಕ್ಕಳು, ಸೋದರ/ರಿಯರು, ಸಂಗಾತಿಗಳು) ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಸಿ) ಐಎಫ್ಎ ಸಂಸ್ಥೆಯಲ್ಲಿ ಉದ್ಯೋಗಿಗಳಾಗಿದ್ದ ಸಮಯದಲ್ಲಿ ಐಎಫ್ಎ ಉದ್ಯೋಗಿಗಳು ಸಮಿತಿ ಸದಸ್ಯರಾಗಿರುವ ಯಾವುದೇ ಸಂಸ್ಥೆಯು ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸುವಂತಿಲ್ಲ.

**1.2 ಐಎಫ್ಎ ಸಂಸ್ಥೆಯ ಉದ್ಯೋಗದ ಅವಧಿಯ ಮುಕ್ತಾಯದ ನಂತರ**

ಎ) ಐಎಫ್ಎ ಸಂಸ್ಥೆಯ ಉದ್ಯೋಗವನ್ನು ಬಿಟ್ಟು ಎರಡು ವರ್ಷಗಳವರೆಗೂ ಐಎಫ್ಎ ಸಂಸ್ಥೆಯ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಬಿ) ಐಎಫ್ಎ ಸಂಸ್ಥೆಯ ಉದ್ಯೋಗವನ್ನು ಬಿಟ್ಟು ಎರಡು ವರ್ಷಗಳವರೆಗೂ ಅವರ ಹತ್ತಿರದ ಸಂಬಂಧಿಗಳು ಕೂಡ ಐಎಫ್ಎ ಸಂಸ್ಥೆಯ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಸಿ) ಐಎಫ್‌ಎ ಸಂಸ್ಥೆಯ ಉದ್ಯೋಗವನ್ನು ಬಿಟ್ಟು ಒಂದು ವರ್ಷದವರೆಗೂ ಅವರು ಸಮಿತಿ ಸದಸ್ಯರಾಗಿರುವ ಯಾವುದೇ ಸಂಸ್ಥೆಯು ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸುವಂತಿಲ್ಲ.

**2. ಟ್ರಸ್ಟಿಗಳು :**

**2.1 ಐಎಫ್‌ಎ ಸಂಸ್ಥೆಯಲ್ಲಿ ಟ್ರಸ್ಟಿಗಳಾಗಿರುವ ಅವಧಿಯಲ್ಲಿ**

ಎ) ಐಎಫ್‌ಎ ಸಂಸ್ಥೆಯಲ್ಲಿ ಬೋರ್ಡ್ ಸಮಿತಿಯ ಟ್ರಸ್ಟಿಗಳಾಗಿರುವ ಅವಧಿಯಲ್ಲಿ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಬಿ) ಐಎಫ್‌ಎ ಸಂಸ್ಥೆಯ ಟ್ರಸ್ಟಿಗಳ ಹತ್ತಿರದ ಸಂಬಂಧಿಗಳು (ಪೋಷಕರ, ಮಕ್ಕಳು, ಸೋದರ/ರಿಯರು, ಸಂಗಾತಿಗಳು) ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಸಿ) ಐಎಫ್‌ಎ ಸಂಸ್ಥೆಯ ಟ್ರಸ್ಟಿಗಳಾಗಿರುವ ಅವಧಿಯಲ್ಲಿ ಅವರು ಸಮಿತಿ ಸದಸ್ಯರಾಗಿರುವ ಇತರೆ ಯಾವುದೇ ಸಂಸ್ಥೆಯು ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸುವಂತಿಲ್ಲ.

**2.2 ಐಎಫ್‌ಎ ಸಂಸ್ಥೆಯ ಟ್ರಸ್ಟಿಗಳ ಅವಧಿಯ ಮುಕ್ತಾಯದ ನಂತರ**

ಎ) ಐಎಫ್‌ಎ ಸಂಸ್ಥೆಯ ಟ್ರಸ್ಟಿಗಳು ತಮ್ಮ ಕಾರ್ಯಾವಧಿಯ ಮುಕ್ತಾಯವಾದ ಮೂರು ವರ್ಷಗಳವರೆಗೂ ಐಎಫ್‌ಎ ಸಂಸ್ಥೆಯ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಬಿ) ಐಎಫ್‌ಎ ಸಂಸ್ಥೆಯ ಟ್ರಸ್ಟಿಗಳ ಕಾರ್ಯಾವಧಿಯು ಮುಕ್ತಾಯವಾದ ಮೂರು ವರ್ಷಗಳವರೆಗೂ ಅವರ ಹತ್ತಿರದ ಸಂಬಂಧಿಗಳು ಕೂಡ ಐಎಫ್‌ಎ ಸಂಸ್ಥೆಯ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಸಿ) ಐಎಫ್‌ಎ ಸಂಸ್ಥೆಯ ಟ್ರಸ್ಟಿಗಳು ತಮ್ಮ ಕಾರ್ಯಾವಧಿಯ ಮುಕ್ತಾಯವಾದ ಒಂದು

ವರ್ಷದವರೆಗೂ ಅವರು ಸಮಿತಿ ಸದಸ್ಯರಾಗಿರುವ ಯಾವುದೇ ಸಂಸ್ಥೆಯು ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸುವಂತಿಲ್ಲ.

**3. ದಾನಿಗಳು :**

**ಕೆಲವು ವ್ಯಾಖ್ಯೆಗಳು**

**"ಐಎಫ್ಎನ ಆತ್ಮೀಯರು"  ``Friends of IFA''**

ಐಎಫ್ಎನ ನಿಧಿಗಾಗಿ, ನಿರ್ದಿಷ್ಟ ಯೋಜನೆಗಾಗಿ ಅಥವಾ ಸಾಮಾನ್ಯ ದೇಣಿಗೆಯಾಗಿ ರೂ ಐವತ್ತು ಸಾವಿರಗಳಿಗಿಂತ (50,000/–) ಕಡಿಮೆ ಮೊತ್ತ ನೀಡುವ ದಾನಿಗಳು

**"ಆಜೀವ ಆತ್ಮೀಯರು"  ``Friends for Life''**

ಐಎಫ್ಎನ ನಿಧಿಗಾಗಿ, ನಿರ್ದಿಷ್ಟ ಯೋಜನೆಗಾಗಿ ಅಥವಾ ಸಾಮಾನ್ಯ ದೇಣಿಗೆಯಾಗಿ ರೂ ಐವತ್ತು ಸಾವಿರಗಳಿಗಿಂತ (50,000/–) ಹೆಚ್ಚು ಹಾಗೂ ಒಂದು ಲಕ್ಷಕ್ಕಿಂತ (1,00,000/–) ಕಡಿಮೆ ಮೊತ್ತ ನೀಡುವ ದಾನಿಗಳು

**"ಪೋಷಕ ದಾನಿಗಳು"  ``Donor Patrons ''**

ಐಎಫ್ಎನ ನಿಧಿಗಾಗಿ, ನಿರ್ದಿಷ್ಟ ಯೋಜನೆಗಾಗಿ ಅಥವಾ ಸಾಮಾನ್ಯ ದೇಣಿಗೆಯಾಗಿ ರೂ ಒಂದು ಲಕ್ಷಕ್ಕಿಂತ (1,00,000/–) ಹೆಚ್ಚು ಮೊತ್ತ ನೀಡುವ ದಾನಿಗಳು

**"ಸಾಂಸ್ಥಿಕ ದಾನಿಗಳು"  ``Institutional Donors ''**

ಐಎಫ್ಎನ ನಿಧಿಗಾಗಿ, ನಿರ್ದಿಷ್ಟ ಯೋಜನೆಗಾಗಿ ಅಥವಾ ಸಾಮಾನ್ಯ ದೇಣಿಗೆಯಾಗಿ ಕೊಡುಗೆ ನೀಡುವ ಕಾರ್ಪೊರೇಟ್ ಸಂಸ್ಥೆಗಳು, ಟ್ರಸ್ಟ್‌ಗಳು, ಸಮಾಜಗಳು, ಸಹಭಾಗಿತ್ವಗಳು ಮುಂತಾದ ಸಂಸ್ಥಾರೂಪದ ದಾನಿಗಳು.

ಎ) **“ಐಎಫ್‌ಎನ ಆತ್ಮೀಯರು”** **``Friends of IFA’’** ಇವರು ತಮ್ಮ ಕೊಡುಗೆಯ ಅವಧಿಯ ಮುಕ್ತಾಯದ ಒಂದು ವರ್ಷದ ನಂತರ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಬಹುದು.

ಬಿ) **“ಆಜೀವ ಆತ್ಮೀಯರು”** **``Friends for Life’’** ಇವರು ತಮ್ಮ ಕೊಡುಗೆಯ ಅವಧಿಯ ಮುಕ್ತಾಯದ ಮೂರು ವರ್ಷಗಳ ನಂತರ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಬಹುದು.

ಸಿ) **“ಪೋಷಕ ದಾನಿಗಳು”** **``Donor Patrons ’’** ಇವರು ತಮ್ಮ ಕೊಡುಗೆಯ ಅವಧಿಯ ಮುಕ್ತಾಯದ ಐದು ವರ್ಷಗಳ ನಂತರ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಬಹುದು.

ಡಿ) **“ಸಾಂಸ್ಥಿಕ ದಾನಿಗಳು”** **``Institutional Donors ’’** ಇವರು ತಾವು ನೀಡಿರುವ ಕೊಡುಗೆಯು ಬಾಕಿ ಇದ್ದ ಅವಧಿಯಲ್ಲಿ ಅನುದಾನಗಳಿಗೆ ಅರ್ಜಿ ಸಲ್ಲಿಸುವಂತಿಲ್ಲ. ದಾನಿ ಸಂಸ್ಥೆಯ ಕೊಡುಗೆಯಾಧಾರಿತ ಯೋಜನೆ ಮುಗಿದು ಅದರ ಆರ್ಥಿಕ ವರದಿಯನ್ನು ಐಎಫ್‌ಎ ಪ್ರಕಟಿಸಿದ ಒಂದು ವರ್ಷದ ನಂತರ ಯಾವುದೇ ಅನುದಾನ ಹಾಗೂ ಫೆಲೋಷಿಪ್‌ಗಳಿಗೆ ಅರ್ಜಿ ಸಲ್ಲಿಸಬಹುದು. ಆ ಯೋಜನೆ ಮುಕ್ತಾಯವಾದ ನಂತರವೇ ದಾನಿ ಸಂಸ್ಥೆಗೆ ಆರ್ಥಿಕ ವರದಿಯನ್ನು ನೀಡಲಾಗುವುದು.

ಇ) ದಾನಿ ಸಂಸ್ಥೆಯ ನೌಕರ ಅಥವಾ ಆ ಸಂಸ್ಥೆಯಲ್ಲಿ ಮಹತ್ವ ಪೂರ್ಣ ಸ್ಥಾನದಲ್ಲಿರುವ ವ್ಯಕ್ತಿ ಅವರ ಕೊಡುಗೆಯಾಧಾರಿತ ಯೋಜನೆಯ ಆರ್ಥಿಕ ವರದಿ ಪ್ರಕಟಣೆಯ ಒಂದು ವರ್ಷದ ನಂತರವೇ ಅನುದಾನಗಳಿಗೆ ಅರ್ಜಿ ಸಲ್ಲಿಸಬಹುದು. ಅಥವಾ ಆ ಸಂಸ್ಥೆಯ ಉದ್ಯೋಗ ಅಥವಾ ಸ್ಥಾನದಿಂದ ನಿರ್ಗಮಿಸಿದ ಒಂದು ವರ್ಷದ ನಂತರ ಅನುದಾನಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.